# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 311 |
| ಸದಸ್ಯರ ಹೆಸರು | : | ಡಾ: ತಳವಾರ್ ಸಾಬಣ್ಣ<br>(ನಾಮ ನಿರ್ದೇಶನ ಹೊಂದಿರುವವರು) |
| ಉತ್ತರಿಸುವ ದಿನಾಂಕ | : | 13-08-2025 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಳಗಾವಿ ನಗರದ ಹಲಗಾ-ಮಚ್ಚೆ-ಹೊನಗಾಕ್ಕೆ ಸಂಪರ್ಕಿಸುವ ರಿಂಗ್‌ರೋಡ್ ಕಾಮಗಾರಿಗೆ ಇಲ್ಲಿಯವರೆಗೆ ಮಾಡಿದ ವೆಚ್ಚವೆಷ್ಟು; (ಕಾಮಗಾರಿಯ ಪ್ರಗತಿಯ ಬಗ್ಗೆ ಮಾಹಿತಿ ನೀಡುವುದು) | ಬೆಳಗಾವಿ ನಗರದ ಹಲಗಾ-ಮಚ್ಚೆ-ಹೊನಗಾಕ್ಕೆ ಸಂಪರ್ಕಿಸುವ ರಿಂಗ್‌ರೋಡ್ ಕಾಮಗಾರಿಗೆ ಸಂಬಂಧಿಸಿದಂತೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು (NHAI) ಈ ಕೆಳಗಿನಂತೆ ವರದಿಸಿರುತ್ತಾರೆ:<br><br>ಬೆಳಗಾವಿ ರಿಂಗ್ ರೋಡ್ ಪ್ಯಾಕೇಜ್-1ನ್ನು ಮಾರ್ಚ್-2023 ರಲ್ಲಿ ಗುತ್ತಿಗೆ ನಿಗಧಿಪಡಿಸಲಾಯಿತು. ಆದರೆ ಭೂಮಿ ಲಭ್ಯವಿಲ್ಲದ ಕಾರಣ Appointed Date ನ್ನು ನೀಡಲು ಸಾಧ್ಯವಾಗಿರುವುದಿಲ್ಲ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ದಿನಾಂಕ:16.05.2024 ರಂದು LOA (Letter of Award) ರದ್ದುಗೊಳಿಸಿದೆ.<br><br>ಮಾನ್ಯ ಉಚ್ಚ ನ್ಯಾಯಾಲಯವು ಕೆಲವು ಸರ್ವೇ ನಂಬರ್‌ಗಳಿಗೆ ಸಂಬಂಧಿಸಿದ 3A ಅಧಿಸೂಚನೆಗಳನ್ನು ರದ್ದುಪಡಿಸಿದೆ. ನ್ಯಾಯಾಲಯದ ತಡೆಯಾಜ್ಞೆಯಿಂದಾಗಿ ಒಟ್ಟು 21.38 ಹೆಕ್ಟೇರ್ ಪ್ರದೇಶದ ಮೇಲೆ ಪರಿಣಾಮ ಬೀರಿದೆ. NHAI ಯು ಈ ತೀರ್ಪನ್ನು Writ Appeal ಮೂಲಕ ಪ್ರಶ್ನಿಸಿದೆ. ಈ ಕಾರಣದಿಂದ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ವಿಳಂಬವಾಗಿರುತ್ತದೆ.<br><br>**ಕಾಮಗಾರಿಯ ಭೂಸ್ವಾಧೀನಕ್ಕಾಗಿ ಇಲ್ಲಿಯವರೆಗೆ ಮಾಡಿದ ವೆಚ್ಚ:**<br>1. ಒಟ್ಟು 202.34 ಹೆಕ್ಟೇರ್ ಪ್ರದೇಶವನ್ನು ಭೂಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಿದ್ದು, ಅದರಲ್ಲಿ 119.67 ಹೆಕ್ಟೇರ್ ಪ್ರದೇಶ ಭೂಸ್ವಾಧೀನ ಅನುಮೋದನೆಯಾಗಿದ್ದು, 34.62% ಪ್ರಗತಿ ಸಾಧಿಸಲಾಗಿರುತ್ತದೆ.<br>2. 12 ಹಳ್ಳಿಗಳಿಗೆ ಒಟ್ಟು ಅವಾರ್ಡ್ ಮೊತ್ತ ₹281.72 ಕೋಟಿ. ಇದುವರೆಗೆ ಒಟ್ಟು 75.06 ಹೆಕ್ಟೇರ್ ಜಮೀನಿಗೆ ₹186.33 ಕೋಟಿ ಪರಿಹಾರವನ್ನು ಭೂಮಾಲೀಕರಿಗೆ ಪಾವತಿಸಲಾಗಿದೆ. |
| ಆ) | ಬೆಳಗಾವಿ ನಗರ ಎರಡನೇ ರಾಜಧಾನಿ ಎಂದು ಹೆಸರು ಪಡೆದಿದ್ದರು ಕಾಮಗಾರಿ ನಿಧಾನಗತಿಯಲ್ಲಿ ನಡೆಯುತ್ತಿದ್ದು, ಇದರಿಂದ ನಗರದ ವಾಹನಗಳ ದಟ್ಟಣೆ | 80% ಭೂಸ್ವಾಧೀನದ ನಂತರ ಬೆಳಗಾವಿ ರಿಂಗ್ ರಸ್ತೆಗೆ ಟೆಂಡರ್‌ಗಳನ್ನು ಮರು ಆಹ್ವಾನಿಸಬೇಕಾಗಿದೆ. |

| | | |
|---|---|---|
| | ಮತ್ತು ಅಭಿವೃದ್ಧಿಗೆ ಮಾರಕವಾಗಿದ್ದು, ಈ ಕಾಮಗಾರಿಯು ಯಾವಾಗ ಪೂರ್ಣಗೊಳ್ಳುತ್ತದೆ: | |
| ಇ) | ಬೆಳಗಾವಿ ನಗರದಿಂದ ರಾಮನಗರ–ಮೊಲೆಮ್–ಗೋವಾಕ್ಕೆ ಹೋಗುವ ಹೆದ್ದಾರಿ ಪ್ರಗತಿಯಾಗದಿರಲು ಕಾರಣಗಳೇನು: | ಗುತ್ತಿಗೆದಾರರ ಕಡೆಯಿಂದ ನಿಧಾನಗತಿಯ ಪ್ರಗತಿ ಕಂಡುಬಂದಿದ್ದು, ಈ ಸಂಬಂಧ ಗುತ್ತಿಗೆದಾರರಿಗೆ ನೋಟೀಸ್ ನೀಡಿ, ದಂಡವನ್ನು ಸಹ ವಿಧಿಸಲಾಗಿದೆ. ಆದಾಗ್ಯೂ, ಯೋಜನೆಯ ಭಾಗವನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ ಮತ್ತು ದಿನಾಂಕ: 31.03.2026 ರೊಳಗೆ ಬಾಕಿ ಕೆಲಸಗಳನ್ನು ಪೂರ್ಣಗೊಳಿಸಲು NHAI ಮತ್ತು EPC ಗುತ್ತಿಗೆದಾರರ ನಡುವೆ ದಿನಾಂಕ:15.07.2025 ರಂದು ಇತ್ಯರ್ಥವಾಗಿದ್ದು, Settlement Agreement-II ಗೆ ಸಹಿ ಮಾಡಲಾಗಿದೆ. |
| ಈ) | ಬೆಳಗಾವಿ ಜಿಲ್ಲೆಯ ಅಭಿವೃದ್ಧಿಗೆ ಬಹು ಮುಖ್ಯವಾಗಿರುವ ಈ ಹೆದ್ದಾರಿ ಕರ್ನಾಟಕ ಗಡಿ ಭಾಗದಲ್ಲಿ (ರಾಮನಗರ ಗ್ರಾಮ) ಕಾಮಗಾರಿ ಅರ್ಧಕ್ಕೆ ನಿಂತಿದ್ದು, ಇದನ್ನು ಪೂರ್ತಿಗೊಳಿಸಲು ಯಾವ ಕ್ರಮ ಕೈಗೊಳ್ಳಲಾಗುವುದು; | ಬಾಕಿ ಕಾಮಗಾರಿಯ ಭಾಗವನ್ನು ನಿರ್ವಹಿಸಲು M/s. V.M. Matere Infrastructure (India) Pvt. Ltd ಇವರಿಗೆ EPC ಮೋಡ್‌ನಲ್ಲಿ ನೀಡಲಾಗಿದೆ.<br>• ಭೌತಿಕ ಪ್ರಗತಿ – 71.95%<br>• ಆರ್ಥಿಕ ಪ್ರಗತಿ – 61.29%<br>• ಯೋಜನೆ ಒಟ್ಟು ಉದ್ದ – 52.30 ಕಿ.ಮೀ<br>• ಹಿಂದಿನ ಗುತ್ತಿಗೆದಾರರು ಪೂರ್ಣಗೊಳಿಸಿದ ಉದ್ದ – 33.90 ಕಿ.ಮೀ<br>• ಬಾಕಿ ಕಾಮಗಾರಿಯಲ್ಲಿ ಪೂರ್ಣಗೊಳಿಸಿದ ಉದ್ದ – 12.27 ಕಿ.ಮೀ<br>• ಪ್ರಗತಿಯಲ್ಲಿರುವ ಬಾಕಿ ಕಾಮಗಾರಿ ಉದ್ದ – 6.13 ಕಿ.ಮೀ |
| ಉ) | ಹಲವು ವರ್ಷಗಳಿಂದ ಕಾಮಗಾರಿ ಪೂರ್ಣಗೊಳ್ಳದೆ, ಇಲ್ಲಿಯ ಜನರಿಗೆ ನಿರಾಸೆಯುಂಟಾಗಿದ್ದು, ಈ ರಿಂಗ್‌ರೋಡ್ ಮತ್ತು ಹೆದ್ದಾರಿಯನ್ನು ಪೂರ್ಣಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? | • ಬೆಳಗಾವಿ ನಗರದ ರಿಂಗ್ ರೋಡ್ ನಿರ್ಮಾಣಕ್ಕಾಗಿ 80% ಭೂಸ್ವಾಧೀನದ ನಂತರ ಟೆಂಡರ್‌ಗಳನ್ನು ಮರು ಆಹ್ವಾನಿಸಬೇಕಾಗಿದೆ.<br>• ಹೆದ್ದಾರಿ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲು ಸಂಬಂಧಪಟ್ಟ ಗುತ್ತಿಗೆದಾರರಿಗೆ ನೋಟೀಸ್ ನೀಡಿ, ದಂಡವನ್ನು ಸಹ ವಿಧಿಸಲಾಗಿದೆ. ಆದಾಗ್ಯೂ, ಯೋಜನೆಯ ಭಾಗವನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ ಮತ್ತು ದಿನಾಂಕ: 31.03.2026 ರೊಳಗೆ ಬಾಕಿ ಕೆಲಸಗಳನ್ನು ಪೂರ್ಣಗೊಳಿಸಲು NHAI ಮತ್ತು EPC ಗುತ್ತಿಗೆದಾರರ ನಡುವೆ ದಿನಾಂಕ:15.07.2025 ರಂದು ಇತ್ಯರ್ಥವಾಗಿದ್ದು, Settlement Agreement-II ಗೆ ಸಹಿ ಮಾಡಲಾಗಿದೆ. |

ಸಂಖ್ಯೆ: ಲೋಇ 312 ಸಿಎನ್‌ಹೆಚ್ 2025 (ಇ)

(ಸತೀಶ ಜಾರಕಿಹೊಳಿ)